# ದಿವ್ಯತ್ರಯರ ಸಂದೇಶಗಳಿಂದ ನನ್ನ ಜೀವನದ ಮೇಲೆ ಆಗಿರುವ ಪ್ರಭಾವ

ಸದಾಶಿವ ಹಿರೇಮಠ
– ಧಾರವಾಡ

ಅದು ೧೯೬೫ ನೇ ಇಸವಿ. ನಾನಾಗ ೯ನೇ ಇಯತ್ತೆಯಲ್ಲಿದ್ದೆ. ಕುವೆಂಪು ವಿರಚಿತ ಪುಸ್ತಕಗಳೆಂದರೆ ನನಗೆ ಆಗಲೇ ಅತಿಯಾದ ಮೆಚ್ಚುಗೆ. ಅಂಥ ದಿನಗಳಲ್ಲಿ ನನಗೆ ಸಿಕ್ಕಿದ್ದು ಅವರು ಬರೆದ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ. ನನಗೆ ಆಗ ಶ್ರೀರಾಮಕೃಷ್ಣ, ಶ್ರೀಮಾತೆ, ಸ್ವಾಮೀಜಿ ಮತ್ತು ಶ್ರೀರಾಮಕೃಷ್ಣ ಸಂಘದ ಬಗ್ಗೆ ಏನೊಂದೂ ತಿಳಿದಿರಲಿಲ್ಲ. ಸ್ವಾಮೀಜಿಯ ಚರಿತ್ರೆ ಓದಿ ಮುಗಿಸುವವರೆಗೂ ಕುಳಿತ ಸ್ಥಳದಿಂದ ಏಳಲಿಲ್ಲ. ಪ್ರಾರಂಭದಲ್ಲೇ ಬರುವ 'ಯಾರಿವನು?' ಇತಿಹಾಸಕ್ಕೆ ಬರೆದ ಮುನ್ನುಡಿಯಂತಿದ್ದು, ಮನಸ್ಸನ್ನು ಸೆರೆಹಿಡಿದುಬಿಟ್ಟಿತ್ತು. ಸ್ವಾಮೀಜಿಯವರನ್ನು ಗುರು ವೆಂದು ಭಾವಿಸುವಷ್ಟರ ಮಟ್ಟಿಗೆ ಪರಿಣಾಮ ಬೀರಿತು.

ಅದೇ ವರ್ಷ ನನ್ನ ತಂದೆಯವರು ತೀರಿಕೊಂಡರು. ಎಳೆಯ ವಯಸ್ಸಿನ ನನ್ನ ಮೇಲೆ ಮನೆಯ ಜವಾಬ್ದಾರಿ ಬಿತ್ತು. ಅನೇಕ ಜಂಜಡಗಳಿಂದ ಜರ್ಜರಿತನಾದೆ. ಅದನ್ನು ಎದುರಿಸುವುದೆಂತು ಎಂದು ತಿಳಿಯದಾದೆ. ಶ್ರೀರಾಮಕೃಷ್ಣರ ಅಮರ ನುಡಿಗಳು ನನ್ನನ್ನಿನ್ನೂ ಆವರಿಸಿರಲಿಲ್ಲ. ಅದಕ್ಕಾಗಿ ನಾನು ೧೯೭೭ ನೇ ಇಸವಿಯವರೆಗೂ ಕಾಯಬೇಕಾಯಿತು– ಆ ವರ್ಷ ಇಂಜಿನಿಯರ್ ಪದವೀಧರನಾಗಿ ಕಾರವಾರ ಜಿಲ್ಲೆಯ ಮಳಗಿಯಲ್ಲಿ ಧರ್ಮಾ ನೀರಾವರಿ ಯೋಜನೆಯಲ್ಲಿ ಇಂಜಿನಿಯರಾಗಿ ಸೇವೆ ಸಲ್ಲಿಸುತ್ತಿದ್ದ ಕಾಲದವರೆಗೂ.

ಮೊದಲಿನಿಂದಲೂ ಅಧ್ಯಾತ್ಮದ ಬಗ್ಗೆ, ಸಾಹಿತ್ಯ ಅಧ್ಯಯನದ ಬಗ್ಗೆ ನನಗಿದ್ದ ಆಕಾಂಕ್ಷೆ ಆಗ ಪೂರ್ತಿಯಾಗಿತ್ತು. ಅಲ್ಲಿನ ಪರಿಸರ ಅದಕ್ಕೆ ಸಹಕಾರಿಯಾಯಿತು. ನೀರಾವರಿ ಇಲಾಖೆಯ ಸಿಬ್ಬಂದಿಯ ವಸತಿಯು ದಟ್ಟ ಕಾಡಿನ ಮಧ್ಯೆಯಿತ್ತು. ಮತ್ತು, ಸಮೀಪದಲ್ಲೇ ಹರಿವ ಧರ್ಮಾ ನದಿ! ಊರಿನ ಗದ್ದಲಗಳಿಂದ ದೂರದ ಶಾಂತ ವಾತಾವರಣ. ಇನ್ನೇನು ಬೇಕು? **ಭಗವದ್ಗೀತೆ, ರಾಮಕೃಷ್ಣ ವಚನವೇದ, ರಾಮಕೃಷ್ಣರ ಲೀಲಾಪ್ರಸಂಗ, ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ** –ಇವುಗಳನ್ನು ಓದಿ ಮುಗಿಸಿದೆ. ರಾಮಕೃಷ್ಣ ಸಂಘದ ಪರಿಚಯವಾದುದು ಹೀಗೆ. ಶ್ರೀರಾಮಕೃಷ್ಣ ಪರಮಹಂಸರ ನುಡಿಗಳು ಎಷ್ಟೊಂದು ಸರಳ, ಹಾಗಿದ್ದರೂ ಎಷ್ಟೊಂದು ಪರಿಣಾಮಕಾರಿ! ಹೃದಯ ತಟ್ಟುವ ಅವರ ಮಾತುಗಳು ಎಷ್ಟೊಂದು ಅರ್ಥಗರ್ಭಿತ! ಓದಿನ ಹಂಗಿಲ್ಲದೆ ತಪಸ್ಸಾಧನೆಯಿಂದ ಗಳಿಸಿ ಹೊರಹೊಮ್ಮಿದ ಆಣಿಮುತ್ತುಗಳು ಅವು. ಅಧ್ಯಾತ್ಮದ ಮೊದಲ ಪರಿಚಯ ನನಗಾದದ್ದು ಆಗಲೇ, ನನ್ನ ನಾಸ್ತಿಕ ಮನಸ್ಸು ಭಗವಂತನೆಡೆಗೆ ತಿರುಗಿತು. ಹಿಂದೊಮ್ಮೆ ನನ್ನ ಗೆಳೆಯರೊಬ್ಬರ ಕೈಯಲ್ಲಿ ಶ್ರೀಮಾತೆಯವರ ಸಂದೇಶಗಳ ಪುಸ್ತಕದಲ್ಲಿ ಶ್ರೀಮಾತೆಯ ಚಿತ್ರ ನೋಡಿದ್ದೆ. ಯಾಕೋ ತಿಳಿಯದು, ಅಮ್ಮನ ಅಡಿದಾವರೆ. ನನ್ನ ಮನಸ್ಸನ್ನು ಸೆಳೆದು ಬಿಟ್ಟಿತು. ಅಮ್ಮ ಇಷ್ಟಮೂರ್ತಿಯಾದರು. ಆದರೆ ಸಾಧನೆಯ ಗಂಧವೇ ಗೊತ್ತಿರಲಿಲ್ಲ. ಧ್ಯಾನ ಎಂದರೆ ಏನೆಂದು ತಿಳಿಯದು. ಈಗ ಪುಸ್ತಕಗಳಿಂದ ಅದರ ಅಲ್ಪ ಪರಿಚಯ ನನಗಾಯಿತು. ಶ್ರೀರಾಮಕೃಷ್ಣರ ಬೋಧನೆಗಳನ್ನು ಓದಿದ ಮೇಲೆಯೇ ನನಗೆ ಭಗವದ್ಗೀತೆ ಸ್ವಲ್ಪವಾದರೂ ಅರ್ಥವಾದದ್ದು.

ಪ್ರಪಂಚದಲ್ಲಿ ಬಾಳುವುದೆಂತು? ಸಕಲ ಕರ್ಮಗಳನ್ನು ಮಾಡುತ್ತ ಅದೇ ಸಮಯದಲ್ಲಿ ಭಗವಂತನೆಡೆಗೆ ಮನಸ್ಸನ್ನು ಹೇಗೆ ಸೆಳೆಯೊಯ್ಯಬೇಕು? ಇದಕ್ಕೆಲ್ಲ ಉತ್ತರ 'ಮ' ಬರೆದಿರುವ ಶ್ರೀರಾಮಕೃಷ್ಣರ ಅಮೃತ ನುಡಿಗಳಲ್ಲಿದೆ. ಆ ಅಮೃತಮಯ ರಸಸಿಂಧುವಿನಲ್ಲಿ ಮಿಂದವರೇ ಧನ್ಯರು, ಮುಕ್ತರು. ದಿನದ ಬಹುಭಾಗ ಭಗವದ್ಭಾವದಲ್ಲಿ ಲೀನರಾಗಿರುತ್ತಿದ್ದ ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ ಅನುಪಮ, ಅಪರೂಪ. ಇತಿಹಾಸದ ಪುಟಗಳಲ್ಲಿ ಕಂಡುಕೇಳಲರಿಯದ್ದು. ಅದಕ್ಕೆ ಸಾಟಿ ಹಿಂದೆಯೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಸಿಗದೇನೋ! ಶ್ರೀರಾಮಕೃಷ್ಣರ ಕಥಾಮೃತವನ್ನು ಓದುತ್ತ ಹೋದಂತೆ ಆ ಬೋಧನೆಗಳಲ್ಲಿ ನಾವು ಮುಳುಗೇ ಹೋಗುತ್ತೇವೆ. ಅವರ ಸಾಧನೆಯ ಒಂದೊಂದು ಹಂತವನ್ನು ಓದಿದಾಗ ಮೈಮನಗಳು ಪುಳಕಗೊಳ್ಳುತ್ತವೆ, ಕಣ್ಣುಗಳು ಅಶ್ರುಭರಿತವಾಗುತ್ತವೆ. ಇಂಥ ಒಬ್ಬ ವ್ಯಕ್ತಿ ನಮ್ಮೀ ಕಲುಷಿತ ಜಗತ್ತಿನಲ್ಲಿ ಜನಿಸಿ ಬರಲು ಸಾಧ್ಯವೇ? ಇಂಥ ಅದ್ಭುತ ಸಾಧನೆ ಒಬ್ಬ ವ್ಯಕ್ತಿಯಿಂದ ಸಾಧ್ಯವೇ? ಅವರು ಮಾಡಿದಂಥ ಒಂದೊಂದು ಸಾಧನೆಯನ್ನು ಸಾಧಿಸಲು ಹಿಂದಿನ ಮಹರ್ಷಿಗಳು ತಮ್ಮ ಆಯಸ್ಸನ್ನೆಲ್ಲ ಕಳೆದರೆ, ಈ ವ್ಯಕ್ತಿ ಎಲ್ಲ ಸಾಧನೆಗಳನ್ನೂ ಒಂದೇ ಜನ್ಮದಲ್ಲಿ ಸಾಧಿಸಿ ಮುಗಿಸಿದರಲ್ಲ. ಅತ್ಯದ್ಭುತ! ಹಾಗಾದರೆ ಈ ವ್ಯಕ್ತಿ ಯಾರು ? ನಮ್ಮ ಮನಸ್ಸು ಮಿಡಿಯುತ್ತದೆ: ಇವರು ಭಗವಂತನಲ್ಲದೆ ಬೇರಲ್ಲ ಎಂದು!

ಕಥೆ ಉಪದೇಶಗಳಿಂದ, ಲೌಕಿಕದ ಘಟನೆಗಳಿಂದ ಅಧ್ಯಾತ್ಮದ ಕಬ್ಬಿಣದ ಕಡಲೆಯನ್ನು ಎಷ್ಟೊಂದು ಸುಲಭವಾಗಿಸಿದರು. ಗೃಹಸ್ಥ ಜಗತ್ತಿನಲ್ಲಿದ್ದು ಭಗವಂತನತ್ತ ಮನಸ್ಸನ್ನು ಹೇಗೆ ಒಯ್ಯಬೇಕು? ಸಂನ್ಯಾಸಿ ಹೇಗಿರಬೇಕು?— ಮೊದಲಾದವುಗಳನ್ನು ಅವರ ಮಾತುಗಳಲ್ಲೇ ನೋಡುವುದು ಸೂಕ್ತ:

'ಎಲ್ಲಾ ಕೆಲಸ ಕಾರ್ಯಗಳನ್ನು ಮಾಡು, ಆದರೆ ಮನಸ್ಸನ್ನು ಭಗವಂತನ ಪಾದಪದ್ಮಗಳಲ್ಲಿ ಇಡು. ಎಲ್ಲರೊಡನೆ, ಅಂದರೆ ಹೆಂಡತಿ ಮಕ್ಕಳು, ತಂದೆ ತಾಯಿ ಇವರೊಡನೆ ಇರು. ಅವರ ಸೇವೆ ಮಾಡು. ಅವರನ್ನೆಲ್ಲ ನಿನ್ನ ಪರಮ ಆಪ್ತರೆಂದೇ ಕಾಣು. ಆದರೆ ಮಾತ್ರ ಅವರಾರೂ ನಿನಗೆ ಸೇರಿದವರಲ್ಲ ಎಂಬುದು ನಿನ್ನ ಹೃದಯಾಂತರಾಳದಲ್ಲಿ ನೆಲೆಸಿರಲಿ.

'ಶ್ರೀಮಂತರ ಮನೆ ದಾಸಿ ಎಲ್ಲ ಕೆಲಸ ಕಾರ್ಯಗಳನ್ನು ಮಾಡುತ್ತಾಳೆ. ಆದರೆ ಆಕೆಯ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯ ಕಡೆಗೇ. ಯಜಮಾನನ ಮಕ್ಕಳನ್ನು ತನ್ನವೆಂದೇ ಬೆಳೆಸುತ್ತಾಳೆ. ಅಷ್ಟೆ ಅಲ್ಲ. ಅವನನ್ನ ಕರೆಯುತ್ತಾಳೆ, 'ನನ್ನ ರಾಮ, ನನ್ನ ಹರಿ' ಎಂಬುದಾಗಿ. ಆದರೆ ಅವರ್‍ಯಾರೂ ತನ್ನವ ರಲ್ಲವೆಂಬುದು ಈಕೆಗೆ ಹೃದಯದಲ್ಲಿ ಚೆನ್ನಾಗಿ ಗೊತ್ತಿದೆ.

'ಆಮೆ ನೀರಿನಲ್ಲಿ ಈಜಾಡುತ್ತಿರುತ್ತದೆ. ಆದರೆ ಅದರ ಮನಸ್ಸೆಲ್ಲಿದೆ ಗೊತ್ತೇ ನಿನಗೆ, ತನ್ನ ಮೊಟ್ಟೆಗಳಿರುವ ದಡದಲ್ಲಿ. ಸಂಸಾರದ ಎಲ್ಲ ಕೆಲಸಕಾರ್ಯಗಳನ್ನು ಮಾಡು, ಆದರೆ ಮನಸ್ಸನ್ನು ಮಾತ್ರ ಭಗವಂತನಲ್ಲಿ ನೆಡು.

'ಮೊದಲು ಕೈಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಂಡುಬಿಡುತ್ತದೆ. ಭಗವದ್ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡ ಬಳಿಕ ಸಾಂಸಾರಿಕ ಕೆಲಸಕಾರ್ಯಗಳಲ್ಲಿ ಕೈ ಇಡಬೇಕು.'

**(ರಾಮಕೃಷ್ಣ ವಚನವೇದ ಸಂ.೧ ಪು.೪)**

ಲೌಕಿಕ ಜಗತ್ತಿನಲ್ಲಿ ನಡೆಯುವ ಘಟನೆಗಳು ನಮಗೆ ಸರ್ವೇಸಾಮಾನ್ಯವಾಗಿ ಕಾಣುತ್ತವೆ. ಆದರೆ ಅವು ಶ್ರೀರಾಮ ಕೃಷ್ಣರ ನುಡಿಗಳಲ್ಲಿ ಅಧ್ಯಾತ್ಮದ ಆಯಾಮ ಹೊಂದುತ್ತವೆ. ಅಲ್ಲಿ ಪಾಂಡಿತ್ಯದ ಅಥವಾ ಭಾಷೆಯ ಪ್ರೌಢಿಮೆ ಎನಿತೂ ಇಲ್ಲ. ಅವು ಅವರ ತಪಸ್ಸು ಮತ್ತು ಅನುಭವದ ಆಳದಿಂದ ಬಂದವು. ಅವರ ಬೋಧನೆ ಇರುವುದು ಹೃದಯ ತಟ್ಟುವ ಭಾಷೆಯಲ್ಲಿ. ಅವರ ದಿನದಿನದ ಅಮೃತ ವಾಕ್ಕುಗಳನ್ನು ಹಿಡಿದಿಟ್ಟದ್ದು ಮಾಸ್ಟರ್ ಮಹಾಶಯ 'ಮ'. ಅವರಿಗೆ ನಾವು ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಹಿಂದೆ ಯಾವ ಅವತಾರ ಪುರುಷನಿಂದಲೂ ಸಿಗದ ಲಾಭ ಇಂದು ನಮಗೆ 'ಮ' ರವರಿಂದ ಲಭ್ಯವಾಗಿದೆ. ಅವರ ದಿನನಿತ್ಯದ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ, ರಾಮಕೃಷ್ಣ ವಚನವೇದದಲ್ಲಿ.

ನನ್ನ ಜರ್ಜರಿತವಾದ ಮನಸ್ಸಿಗೆ ರಾಮಕೃಷ್ಣ ವಚನವೇದದ ಓದಿನಲ್ಲಿ ನೆಮ್ಮದಿ, ಭರವಸೆ ದೊರಕಿತು. ನನ್ನ ಬಾಳಿನಲ್ಲಿ ಪರಿವರ್ತನೆ ಉಂಟಾಯಿತು. ನನ್ನ ಸಂಕುಚಿತ ಮನಸ್ಸಿನಲ್ಲಿ ಉದಾರ ಭಾವ ತುಂಬಿ ಬಂದಿತು. ಯಾವುದನ್ನೂ ತ್ಯಜಿಸದ ಎಲ್ಲವನ್ನೂ ಸ್ವೀಕರಿಸುವ ಅವರ ಸಾರ್ವತ್ರಿಕ ಅನುಭವದ ಮಾತುಗಳು ನನ್ನ ಹೃದಯದಲ್ಲಿ ತುಂಬಿ ನಿಂದವು. ಎಷ್ಟು ಮತಗಳೋ ಅಷ್ಟು ಪಥಗಳು. ನೀರು ತುಂಬಿರುವ ಕೆರೆಯನ್ನು ಬೇರೆ ಬೇರೆ ಜನರು 'ಜಲ', 'ಪಾನಿ', 'ನೀರು', 'ವಾಟರ್' ಎಂದೆಲ್ಲ ಕರೆಯುವಂತೆ ಭಗವಂತನ ಬೇರೆ ಬೇರೆ ಹೆಸರು ಗಳು— ಶಿವ, ವಿಷ್ಣು, ಕ್ರಿಸ್ತ, ಅಲ್ಲಾ ಮೊದಲಾಗಿ. ಆದರೆ ವಾಸ್ತವದಲ್ಲಿ ಅವನೊಬ್ಬನೇ.

ಬ್ರಹ್ಮ ಶಕ್ತಿ ಇಬ್ಬರೂ ಎರಡಲ್ಲ ಒಂದೇ — ಬೆಂಕಿ ಮತ್ತು ಅದರ ಸುಡುವ ಶಕ್ತಿಯಂತೆ. ಇದನ್ನು ಶ್ರೀರಾಮಕೃಷ್ಣರು-ಶ್ರೀಮಾತೆಯವರಲ್ಲಿ ನಾನು ಕಂಡೆ. ನನಗೆ ದೀಕ್ಷೆ ನೀಡಿದ ಗುರು ಸ್ವಾಮಿ ಭೂತೇಶಾನಂದಜಿ ಮಹಾರಾಜರು ಹೇಳಿದ್ದು ಅದನ್ನೇ. ಅವರಿಬ್ಬರನ್ನು ಒಂದೇ ಎಂದು ತಿಳಿದು, ನಾನು ನಿನಗಿತ್ತ ಮಂತ್ರ ಜಪಿಸು ಎಂದು ಉಪದೇಶಿಸಿದ್ದರು.

**ಜನನೀಂ ಶಾರದಾಂ ದೇವೀಂ ರಾಮಕೃಷ್ಣ ಜಗದ್ಗುರುಂ ।**
**ಪಾದಪದ್ಮೇ ತಯೋಃ ಶ್ರಿತ್ವಾ ಪ್ರಣಮಾಮಿ ಮುಹುರ್ಮುಹುಃ ॥**

ಎಂದು ಹೃದಯ ತುಂಬಿ ನನ್ನ ತನುಮನ ಅವರ ಅಡಿಗಳಿಗೆ ವಿನೀತವಾಗಿ ತಲೆಬಾಗುತ್ತದೆ. ನನ್ನ ಸಂಕಟದ ಸಂದಿಗ್ಧ ಸಮಯ ಗಳಲ್ಲೆಲ್ಲ ನನ್ನನ್ನು ಅವರು ಕೈ ಹಿಡಿದು ನಡೆಸುತ್ತಿರು ವರೆಂದು ನನ್ನ ನಂಬಿಕೆ. ಇಂದಿನ ಯಾಂತ್ರಿಕ ಜಗತ್ತಿಗೆ, ಕಲುಷಿತ ಜಗತ್ತಿಗೆ ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮೀಜಿ ಯವರ ನುಡಿಮುತ್ತುಗಳು ಅಮೃತಸಮಾನ. ಮತಮತಗಳ ನಡುವಿನ ವೈಷಮ್ಯತೆಗೆ ಅವರ ಬೋಧನೆಗಳೇ ತಕ್ಕ ಉತ್ತರ, ಪರಿಹಾರ.

## ಬಹುಮುಖೀ ವ್ಯಕ್ತಿತ್ವ



ಅಖಂಡಾನಂದರು ತಮ್ಮನ್ನು ತಾವೇ ರೂಪಿಸಿಕೊಂಡವರು. ಅವರು ವ್ಯಾಪಕವಾಗಿ ಓದಿದವರು, ಭಾಷಾತಜ್ಞರು, ಶಕ್ತಿಶಾಲಿ ಭಾಷಣಕಾರರು, ಹಾಸ್ಯಮಯ ಮಾತುಗಾರರು ಹಾಗೂ ಒಳ್ಳೆಯ ಬರಹಗಾರರು. ಅವರ ನೆನಹುಗಳು(*ಸ್ಮೃತಿಕಥಾ*) ಮತ್ತು ಪ್ರವಾಸಕಥನಗಳು *ಉದ್ಬೋಧನ್* ಮತ್ತು *ಬಸುಮತಿ*ಗಳಲ್ಲಿ ಧಾರಾವಾಹಿಯಾಗಿ, ನಂತರ ಪುಸ್ತಕರೂಪದಲ್ಲಿ, ಪ್ರಕಟವಾದುವು. ೧೯೦೬ರಲ್ಲಿ ಅಭೇದಾನಂದರು ಅಮೆರಿಕಾದಿಂದ ಹಿಂದಿರುಗಿ ಬಂದಾಗ, ಅವರು ಅಖಂಡಾನಂದರನ್ನು ಪಶ್ಚಿಮದೇಶಗಳಿಗೆ ಕರೆದೊಯ್ಯಬೇಕೆಂದು ಬಯಸಿದರು; ಆದರೆ ಅಖಂಡಾನಂದರು ಒಪ್ಪಲಿಲ್ಲ. ಅವರು ವೇದಾಂತವನ್ನು ಬೋಧಿಸುವುದಕ್ಕಿಂತ ಹಳ್ಳಿಯಲ್ಲಿನ ಬಡವರಾದ ಜೀವಂತ ದೇವರನ್ನು ಪೂಜಿಸುವುದನ್ನೇ ಇಷ್ಟಪಟ್ಟರು. ಅವರು ಇಟಲಿಯ ಮಜ್ಜಿನಿಯ ಮತ್ತು ಗರಿಬಾಲ್ಡಿಯ ದೇಶಭಕ್ತಿಯನ್ನು ಗೌರವಿಸುತ್ತಿದ್ದರು; ಫ್ಲಾರೆನ್ಸ್ ನೈಟಿಂಗೇಲ್ ಮತ್ತು ಬೂಕರ್ ಟಿ. ವಾಷಿಂಗ್‌ಟನ್‌ರ ಸೇವಾಮನೋಭಾವದಿಂದ ತುಂಬ ಸ್ಫೂರ್ತಿ ಪಡೆದರು. ಅವರಿಗೆ ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್, ಚಿತ್ತರಂಜನ ದಾಸ್‌ರಂತಹ ಭಾರತದ ರಾಷ್ಟ್ರೀಯ ನಾಯಕರ ಮೇಲೆ ಅಗಾಧವಾದ ಮೆಚ್ಚಿಗೆಯಿದ್ದಿತು; ಅವರುಗಳ ಸ್ವಾರ್ಥತ್ಯಾಗ ಮತ್ತು ರಾಷ್ಟ್ರಸೇವೆಯನ್ನು ಬಹುವಾಗಿ ಗೌರವಿಸುತ್ತಿದ್ದರು.